# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ** 5050/2024 ಫ್ರಾಸಾ-25
ಚಾಸಾ-30

ದಿನಾಂಕಃ 01-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮಾಳಪ್ಪ ನಾಯಕೊಡಿ |
| **ತಂದೆಯ / ಗಂಡನ ಹೆಸರು** | ಹನುಮಂತ |
| **ವಯಸ್ಸು** | 32 |
| **ಉದ್ಯೋಗ** | ಪಿ.ಎಸ್.ಐ, ಚೆಳೂರು ಪೊಲೀಸ್ ಠಾಣೆ |
| **ವಾಸಸ್ಥಳ** | ಚೆಳೂರು |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು ದಿ.27.07.2023 ರಿಂದ ದಿ.24.10.2025 ರವರೆಗೆ ವೈ.ಎನ್. ಹೊಸಕೋಟೆ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ.13.08.2024 ರಂದು ಬೆಳಗಿನ ಜಾವ 3-00 ಗಂಟೆಗೆ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವಿಕರಿಸಿ ಠಾಣಾ ಮೊ ನಂ-61/2024 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಪ್ರಥಮ ವರ್ತಮಾನ ವರದಿ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-43 ಎಂದು, ಸಾಕ್ಷಿ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು.

ದಿ.13.08.2024 ರಂದು ಪಾವಗಡ ಗ್ರಾಮ ವೃತ್ತ ನಿರೀಕ್ಷಕರ ಆದೇಶದಂತೆ ಶವ ತನಿಖೆಗಾಗಿ ಬೆಂಗಳೂರು ನಿಮಾನ್ಸ್ ಆಸ್ಪತ್ರೆಗೆ ಮಾಧ್ಯಾಹ್ನ 3-00 ಗಂಟೆಗೆ ಬೇಟಿ ಕೊಟ್ಟಿದ್ದು ಆ ಸಮಯದಲ್ಲಿ ಆರ್.ಎಂ.ಒ. ರವರು ಮಿಟಿಂಗ್ ಹೋಗಿದ್ದು ಅವರು ವಾಪಸ್ಸು ಬರಲು ಅವೇಳೆಯಾಗಿದ್ದರಿಂದ ದಿ. 14.08.2024 ರಂದು ವಿಕ್ಟೋರೀಯಾ ಆಸ್ಪತ್ರೆಗೆ ಶವವನ್ನು ಸಾಗಿಸಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ಶವ ಪರೀಕ್ಷೆಗೆ ಬಹಳಷ್ಟು ಬಾಕಿ ಇದುದ್ದರಿಂದ ಶವವನ್ನು ಕಿಮ್ಸ್ ಆಸ್ಪತ್ರೆಗೆ ಸಾಗಿಸಲಾಗಿರುತ್ತದೆ. ಅದೇ ದಿನ ಮದ್ಯಾಹ್ನ 1-00 ರಿಂದ 3-00 ಗಂಟೆಯವರೆಗೆ ಶವ ತನಿಖೆಯನ್ನು ಪಂಚರಾದ ಚಾಸಾ-13 ರಿಂದ 15 ರವರ ಸಮಕ್ಷಮ ಶವ ತನಿಖೆಯನ್ನು ನಿಪಿ-18 ರಂತೆ ಕೈಗೊಂಡಿರುತ್ತೇನೆ. ಶವ ತನಿಖಾ ಕಾಲಕ್ಕೆ ಚಾಸಾ-16 ರಿಂದ 18 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ-18 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-18(ಹೆಚ್) ಎಂದು ಗುರುತಿಸಲಾಯಿತು. ಚಾಸಾ-16 ರಿಂದ 18 ರವರು ನನ್ನ ಮುಂದೆ ನಿಪಿ-18(ಡಿ),(ಇ),(ಎಫ್) ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಶವ ತನಿಖಾ ಕಾಲಕ್ಕೆ ನಿಪಿ-19 ಮತ್ತು 20 ರಂತೆ ಪೋಟೋ ತೆಗೆಸಿರುತ್ತದೆ. ನಿಪಿ-19 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ವಾಪಸ್ಸು ಬಂದು ಚಾಸಾ-31 ರವರಿಗೆ ವರದಿ ಕೊಟ್ಟಿರುತ್ತೇನೆ.

ಚಾಸಾ-31 ರವರು ನನಗೆ ನೀಡಿದ ಮೆಮೋವನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿರುವ ದಿ.13.08.2024 ರ ಮೊಮೋ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-44 ಎಂದು, ಸಾಕ್ಷಿ ಸಹಿಯನ್ನು ನಿಪಿ-44(ಎ) ಎಂದು ಗುರುತಿಸಲಾಯಿತು. ನಿಮಾನ್ಸ್ ಆಸ್ಪತ್ರೆಯವರು ನೀಡಿರುವ ಹಿಂಬರಹ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-45 ಎಂದು, ಸಾಕ್ಷಿ ಸಹಿಯನ್ನು ನಿಪಿ-45(ಎ) ಎಂದು ಗುರುತಿಸಲಾಯಿತು. ನಿಮಾನ್ಸ್ endorsement 45(ಬಿ) ಎಂದು ಗುರುತಿಸಲಾಯಿತು. ಮೃತ ದೇಹ ಕೊಡಲು ನಿಮಾನ್ಸ್ ಆಸ್ಪತ್ರೆಯಗೆ ನಾನು ಮನವಿ ಕೊಟ್ಟಿರುತ್ತೇನೆ. ನಿಮಾನ್ಸ್ ಆಸ್ಪತ್ರೆಯವರು ನೀಡಿರುವ ಹಿಂಬರಹ ನೋಡಿದರೆ ಗುರುತಿಸುತ್ತೇನೆ.

ನ್ಯಾಯಾಲಯದಲ್ಲಿರುವ ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ವರದಿಯನ್ನು ನಿಪಿ-46 ಎಂದು, ಸಾಕ್ಷಿ ಸಹಿಯನ್ನು ನಿಪಿ-46(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಶ್ರೀ. ಬಿ.ಬಿ.ಎಂ. ವಕೀಲರಿಂದ ಆರೋಪಿ ಪರವಾಗಿಃ-</u>**

ನಮ್ಮ ವೃತ್ತ ನಿರೀಕ್ಷಕರು ಶವ ತನಿಖೆ ಕೈಗೊಳ್ಳಲು ನನಗ ಮೆಮೋವನ್ನು ಬೆಳಿಗ್ಗೆ 7-00 ಗಂಟೆಗೆ ನೀಡಿರುತ್ತಾರೆ. ಸದರಿ ಮೆಮೋ ಪಡೆದುಕೊಂಡ ನಂತರ ತಕ್ಷಣ ಪಾವಗಡ ಕಚೇರಿಯಿಂದ ಹೊರಟಿರುತ್ತೇನೆ. ಪಾವಗಡ ವೃತ್ತ ನಿರೀಕ್ಷಕರ ಕಚೇರಿಯಿಂದ ನಿಮಾನ್ಸ್ ಆಸ್ಪತ್ರೆಗೆ ಹೋಗಲು 3-00 ಗಂಟೆ ಬೇಕಾಗುತ್ತದೆ ಎಂದರೆ 4-00 ಗಂಟೆ ಬೇಕಾಗುತ್ತದೆ. ನಾವು ನಿಮಾನ್ಸ್ ಗೆ ತಲುಪಿದಾಗ ಮದ್ಯಾಹ್ನ 12-30 ರಿಂದ 1-00 ಗಂಟೆ ಆಗಿತ್ತು. ನಿಮಾನ್ಸ್ ಆಸ್ಪತ್ರೆಯವರು ಮರು ದಿನ ಬೆಳಿಗ್ಗೆ 8-00 ಗಂಟೆಗೆ ಶವವನ್ನು ಹಸ್ತಾಂತರ ಮಾಡಿರುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಗೆ ಹೋದಾಗ ಸಮಯ 10-00 ಗಂಟೆ ಆಗಿತ್ತು. ಕಿಮ್ಸ್ ಆಸಪತ್ರೆಗೆ ಹೋದಾಗ ಸಮಯ ಮದ್ಯಾಹ್ನ 12-30 ಗಂಟೆ ಆಗಿತ್ತು.

ಚಾಸಾ-13 ರಿಂದ 15 ರವರಿಗೆ ಪಂಚರಾಗಿ ಬರಲು ಮುಂಚಿತವಾಗಿ ನೋಟೀಸು ಕೊಟ್ಟಿರುತ್ತೇನೆ. ಸದರಿ ನೋಟೀಸಿನಲ್ಲಿ ಯಾವ ಜಾಗಕ್ಕೆ ಬರಬೇಕು ಎಂದು ಹೇಳಿರುವುದಿಲ್ಲ. ಪಂಚರಿಗೆ ನೋಟೀಸು ಜಾರಿ ಮಾಡಿರುವುದಿಲ್ಲ ಮತ್ತು ಪಂಚರ ಶವ ತನಿಖಾ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಮೃತ ರಕ್ತಸಂಬಧಿಗಳ ಹೇಳಿಕೆ ಪಡೆಯಲು ಒಬ್ಬೊಬ್ಬರಿಗೆ 30 ನಿಮಿಷ ಬೇಕಾಗಿರುತ್ತದೆ. ಶವ ತನಿಖೆಯನ್ನು ಮದ್ಯಾಹ್ನ 1-00 ಗಂಟೆಗೆ ಫ್ರಾರಂಭಮಾಡಿರುತ್ತೇವೆ. ಕಿಮ್ಸ್ ಆಸ್ಪತ್ರೆಯಲ್ಲಿ ಶವ ತನಿಖೆಯನ್ನು ಕೈಗೊಂಡಿರುವುದಿಲ್ಲ ಪೊಲೀಸ್ ಠಾಣೆಯಲ್ಲಿ ನಿಪಿ-18 ನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-19 ಮತ್ತು 20 ಸ್ಥಳದಲ್ಲಿ ತೆಗೆದ ಪೊಟೋಗಳು ಆಗಿರುವುದಿಲ್ಲ ಎಡಿಟ್ ಮಾಡಿರುವ ಪೊಟೋಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಪಿರಾದಿ ಬಂದಾಗ ಸಮಯ ಮಧ್ಯರಾತ್ರಿ ರಾತ್ರಿ 2-30 ಗಂಟೆಗೆ ಆಗಿತ್ತು.

ಚಾಸಾ-1 ರವರು ಠಾಣೆಗೆ ಹಾಜರಾಗಿ ನಿಪಿ-2 ರಂತೆ ದೂರು ಕೊಟ್ಟಿರುವುದಿಲ್ಲ. ಸದರಿ ನಿಪಿ-2 ನ್ನು ನಾನೇ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರ ಬಗ್ಗೆ ದೂರು ಕೊಟ್ಟಿರುವ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-16 ರಿಂದ 18 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**